ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,
ಕುಂದಾಪುರ

ಒ.ಎಸ್.ನಂಬ್ರಃ 2/2015
ಡಿ.ಡಬ್ಲ್ಯೂ : 1

ದಿನಾಂಕಃ 18-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ವಾದಿ ಪರ ಶ್ರೀ ಎಮ್ ಎಮ್ ಎಚ್ ವಕೀಲರಿಂದಃ

1. ನಾನು PWD ಕುಂದಾಪುರ ಕಚೇರಿಯಲ್ಲಿ ಆಗಸ್ಟ್ 5, 2024 ರಿಂದ ಅಭಿಯಂತರ ಸಹಾಯಕ ಕಾರ್ಯಪಾಲಕನಾಗಿ ಕೆಲಸ ನಿರ್ವಹಿಸುತ್ತೇನೆ. ಬಿ ಶೆಡ್ಯೂಲ್ ಗೂಡು ಅಂಗಡಿಯನ್ನು ನೋಡಿರುತ್ತೇನೆ. ನಾನು ಸಾಕ್ಷ್ಯವನ್ನು ದಾಖಲೆಗಳ ಆಧಾರದ ಮೇಲೆ ಹಾಗೂ ಸ್ವತಃ ಸ್ವತ್ತನ್ನು ನೋಡಿ ಬಂದಿದ್ದ ಮೇರೆಗೆ ಸಾಕ್ಷಿ ಹೇಳುತ್ತಿದ್ದೇನೆ. ಸರ್ವೆ ನಂಬರ್ 169/10 ಎ ರಲ್ಲಿ ಇರುತ್ತದೆ ಎಂದರೆ ಸಾಕ್ಷಿ 160/10 ಎ ರಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ.

2. ನಾನು ಈ ಪ್ರಕರಣದಲ್ಲಿ 1 ನೇ ಪ್ರತಿವಾದಿ ಸಲ್ಲಿಸಿರುವ ಲಿಖಿತ ತಕರಾರನ್ನು ನೋಡಿರುತ್ತೇನೆ. ನನ್ನ ಪ್ರಕಾರ ಗೂಡು ಅಂಗಡಿ ಸರ್ವೆ ನಂಬರ್ 160/10 ಎ ರಲ್ಲಿ ಇರುತ್ತದೆ. ಅದು ಸರ್ಕಾರಿ ಜಾಗ ಇರುತ್ತದೆ. ಸರ್ವೆಯರ್ ರವರು ಅಳತೆ ಮಾಡಿ ಸರ್ಕಾರಿ ಜಾಗದಲ್ಲಿ ಇರುತ್ತದೆ ಎಂದು ನಕ್ಷೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಆ ಗೂಡು ಅಂಗಡಿ ಇರುವುದು ಕೋಡಿ ಕಿನೆರಾ ರಸ್ತೆಯ ದಕ್ಷಿಣಕ್ಕೆ ಇರುತ್ತದೆ ಎಂದರೆ ಸರಿ. ಗೂಡು ಅಂಗಡಿ ಹಾಗೂ ರಸ್ತೆಯ ನಡುವೆ ರಸ್ತೆಗೆ ತಾಗಿ ಡ್ರೈನೇಜ್ 2.5 ರಿಂದ 3 ಅಡಿ ಅಗಲ ಇರುತ್ತದೆ.

3. ಕೋಡಿ ಕಿನರಾ ರಸ್ತೆಯ ಎರಡು ಬದಿ ಮಾರ್ಜಿನ್ ನಲ್ಲಿ ಒಂದೇ ಗೂಡು ಅಂಗಡಿ ಇರುತ್ತದೆ. ನಮ್ಮ ಕಚೇರಿಯ ದಾಖಲೆಗಳಲ್ಲಿ ಸದರಿ ರಸ್ತೆಗೆ ಕೋಟೇಶ್ವರ ಕೋಡಿ ಕುಂದಾಪುರ ರಸ್ತೆ ಎಂದು ನಮೂದು ಇರುತ್ತದೆ ಎಂದು ನುಡಿಯುತ್ತಾರೆ. ಈಗ ಹೋಗಿ ನೋಡಿದರೂ ಸಹ ಸದರಿ ರಸ್ತೆಯ ಎರಡು ಬದಿಯ ಮಾರ್ಜಿನ್ 10 ರಿಂದ 15 ಗೂಡು ಅಂಗಡಿ ಇರುತ್ತದೆ ಎಂದರೆ ಸಾಕ್ಷಿ ನಮ್ಮ ಗಮನಕ್ಕೆ ಬಂದಂತೆ ದಾಖಲಾತಿ ಪ್ರಕಾರ ಒಂದೇ ಗೂಡು ಅಂಗಡಿ ಇರುತ್ತದೆ ಎಂದು ನುಡಿಯುತ್ತಾರೆ.

4. ರೋಡ್ ಮಾರ್ಜಿನ್ ಎಂಬುವುದು ಸರ್ಕಾರದ ಸ್ವತ್ತು ಎಂದರೆ ಸರಿ. ರೋಡನ್ನು ಹಾಕಿದ್ದು ದಿನಾಂಕ 05-06-2014 ರವರೆಗೆ ಸದರಿ ರಸ್ತೆ ಪಿಶರಿಸ್ ರವರಿಗೆ ಸೇರಿತ್ತು. ತದನಂತರದಲ್ಲಿ ನಮ್ಮ ಸ್ವಾಧೀನಕ್ಕೆ ಕೊಟ್ಟಿರುತ್ತಾರೆ. ರಸ್ತೆಯ ರೋಡ್ ಮಾರ್ಜಿನ್ ಗಳನ್ನು ಸರ್ಕಾರದ ಪರವಾಗಿ ಲೋಕೋಪಯೋಗಿ ಇಲಾಖೆ ದುರಸ್ತಿ ಮಾಡುತ್ತದೆ. ನಾನು ನೋಡಿದ ರೀತಿ ಸದರಿ ಗೂಡು ಅಂಗಡಿಯ ಮಾಡು ಶೀಟ್ ರೂಪ್ ಇರುತ್ತದೆ. ತಗಡು ಅಥವಾಗಿ ಎ ಸಿ ಶೀಟ್ ಇರಬಹುದು, ನಾನು ಸರಿಯಾಗಿ ಗಮನಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಅದರ ಅಗಲ ಗರಿಷ್ಟ 10 X 10 ಇರಬಹುದು.

5. ಸದರಿ ಪೀಶರಿಸ್ ರಸ್ತೆ 12 ಅಡಿ ಅಗಲ ಇರಬಹುದು. ರೋಡ್ ಬದಿ ಮಾರ್ಜಿನ್ ಎರಡು ಕಡೆ ನನ್ನ ಪ್ರಕಾರ 9 ಮೀ ರಿಂದ 15 ಮೀ ಇರಬಹುದು. ರಸ್ತೆ ಒಂದೇ ಅಗಲ ಇರುವುದಿಲ್ಲ, ಅಲ್ಲಿ ಅಲ್ಲಿ ವ್ಯತ್ಯಾಸ ಇರುತ್ತದೆ ಎಂದು ನುಡಿಯುತ್ತಾರೆ. ಖಾಸಗಿ ಭೂವಿಯಲ್ಲಿ ಸಹ ಅವರ ಗಡಿ ಗುರುತಿನಿಂದ 6 ಮೀ ಅಂತರವನ್ನು ಬಿಟ್ಟು ಶಾಶ್ವತ ಕಟ್ಟಡ ನಿರ್ಮಿಸಬೇಕೆಂದು ನಿಯಮ ಇರುತ್ತದೆ ಎಂದು ನುಡಿಯುತ್ತಾರೆ. ಬಂಕ್ ಶಾಪ್ ನ್ನು 1970 ರಲ್ಲಿ ಹಾಕಿರುತ್ತಾರೆ ಎಂದರೆ ಸಾಕ್ಷಿ ನಮ್ಮ ಬಳಿ ದಾಖಲೆ ಇರುವುದಿಲ್ಲ ಎಂದು ನುಡಿಯುತ್ತಾರೆ.

6. ನನ್ನ ಪ್ರಕಾರ ಆ ಬಂಕ್ ಶಾಪ್ ಶಾಶ್ವತ ಕಟ್ಟಡವಲ್ಲ. ಶೀಟನ್ನು ಹಾಕಿ ಕಟ್ಟಿರಬಹುದು. ಸಾಕ್ಷಿ ಪುನಃ ಶೀಟ್ ಅಲ್ಲ, ಆದರೆ ಅದು ಶಾಶ್ವತ ಕಟ್ಟಡವಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿ.ಪಿ.6 ಮತ್ತು 7 ರ ಚಾಯಾಚಿತ್ರ ತೋರಿಸಿದ್ದು ಇದೇ ಬಂಕ್ ಶಾಪ್ ಎಂದು ನುಡಿಯುತ್ತಾರೆ. 1977-78 ರಲ್ಲಿ ಹುಲ್ಲಿನ ಮಾಡ್ ತೆಗೆದು ಶೀಟ್ ಹಾಕಿ ಕಟ್ಟಿರುತ್ತಾರೆ ಎಂದರೆ ಸಾಕ್ಷಿ ದಾಖಲೆಗಳನ್ನು ನೋಡಿ ನಮಗೆ ಆ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ದಿನಾಂಕ 08-01-2008 ರಲ್ಲಿ ಆ ರಸ್ತೆ ನಮ್ಮ ಇಲಾಖೆಗೆ ಹಸ್ತಾಂತರಿಸಿರುತ್ತಾರೆ ಎಂದು ನುಡಿಯುತ್ತಾರೆ.

7. ಬಂಕ್ ಶಾಪ್ ಇದ್ದ ಜಾಗದ ಸ್ವಾಧೀನಾನುಭವ ವಾಸುದೇವ ದೇವಾಡಿಗರವರು ಇರುತ್ತಾರೆ, ಸಾಕ್ಷಿ ಅತಿಕ್ರಮವಾಗಿ ಸ್ವಾಧೀನ ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ವಾದಿ ಸ್ಥಿರವಾದ ಹಕ್ಕಿನಿಂದ ವ್ಯವಹಾರ ಮಾಡಿಕೊಂಡು ಬರುತ್ತಿರುತ್ತಾರೆ ಎಂದರೆ ಸಾಕ್ಷಿ ಅದು ಅತಿಕ್ರಮ ಸ್ವಾಧೀನ ಇರುತ್ತಾರೆ ಎಂದು ನುಡಿಯುತ್ತಾರೆ. ಆ ಸ್ಥಳದಿಂದ ಅವರನ್ನು ಬಲತ್ಕಾರವಾಗಿ ಎಳಿಸಲು ಅಧಿಕಾರ ನಮಗೆ ಇರುವುದಿಲ್ಲ, ಕಾನೂನುಬದ್ದವಾಗಿ ಎಳಿಸಬೇಕು ಎಂದರೆ ಸರಿ.

8. ಪಬ್ಲಿಕ್ ಇವಿಕ್ಷನ್ ಪ್ರಿಮಿಸೆಸ್ ಆ್ಯಕ್ಟ್ ಪ್ರಕಾರ ವಾದಿಗಳಿಗೆ ನೋಟಿಸು ಕೊಟ್ಟಿರುತ್ತೇವೆ. ಆ ನೋಟಿಸನ್ನು ನಮ್ಮ ವಕೀಲರಿಗೆ ನಾನು ಕೊಟ್ಟಿರುತ್ತೇನೆ. ವಾದಿಯ ವಿರುದ್ಧ ಪಬ್ಲಿಕ್ ಪ್ರಿಮಿಸೆಸ್ ಇವಿಕ್ಷನ್ ಆ್ಯಕ್ಟ್ ಪ್ರಕಾರ ಪ್ರೊಸಿಡಿಂಗ್ಸ್ ದಾಖಲು ಆಗಿರುತ್ತದೆ. ದಾಖಲಾದ ನಂತರ ಈ ಪ್ರಕರಣ ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ನೋಟಿಸು ಕೊಟ್ಟ ಮೇರೆಗೆ ಅವರು ಸಿವಿಲ್ ನ್ಯಾಯಲಯಕ್ಕೆ ಬಂದಿರುತ್ತಾರೆ. ಸಿವಿಲ್ ನ್ಯಾಯಲಯದಲ್ಲಿ ವಜಾ ಆದರೆ ಪ್ರೊಸಿಡಿಂಗ್ಸ್ ಮುಂದುವರಿಸುತ್ತೇವೆ ಎಂದು ನುಡಿಯುತ್ತಾರೆ.

9. ಪಬ್ಲಿಕ್ ಪ್ರಿಮಿಸೆಸ್ ಇವಿಕ್ಷನ್ ಆ್ಯಕ್ಟ್ ನ ಪ್ರಕಾರ ನಾವು ವಾದಿಗಳಿಗೆ ಯಾವುದೇ ನೋಟಿಸು ಕೊಟ್ಟಿರುವುದಿಲ್ಲ ಹಾಗೂ ಬಲತ್ಕಾರವಾಗಿ ಎಬ್ಬಿಸಲು ಪ್ರಯತ್ನಿಸಿರುತ್ತೇವೆ ಎಂದರೆ ಸರಿಯಲ್ಲ. ಈ ನ್ಯಾಯಲಯದಲ್ಲಿ ವಾದಿ ನಮ್ಮನ್ನು ಕಾನೂನುಬದ್ಧವಾಗಿ ಎಬ್ಬಿಸಬೇಕು ಎಂದು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ನಮಗೆ ನೊಟೀಸು ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ನಾವು ಈವರಗೆ ವಾದಿಯ ವಿರುದ್ಧ ಪಬ್ಲಿಕ್ ಪ್ರಿಮಿಸೆಸ್ ಇವಿಕ್ಷನ್ ಆ್ಯಕ್ ನ ಪ್ರಕಾರ ಯಾವುದೇ ನೋಟಿಸು ಕೊಟ್ಟಿಲ್ಲದೆ ಇರುವುರಿಂದ ಸದರಿ ನೋಟಿಸು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

10. ಅನಂತಪದ್ಮನಾಭ ಉಡುಪರವರು 1 ನೇ ಪ್ರತಿವಾದಿಯ ವಿರುದ್ಧ ಲೋಕಾಯುಕ್ತರವರಿಗೆ ದೂರು ಕೊಟ್ಟಿರುತ್ತಾರೆ. ಅನಂತಪದ್ಮನಾಭ ಉಡುಪರವರನ್ನು ಹೊರತು ಪಡಿಸಿ ಆ ಗೂಡು ಅಂಗಡಿ ತೆಗೆಯಿರಿ ಎಂದು ಯಾರು ದೂರು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಅನಂತಪದ್ಮನಾಭ ಉಡುಪರವರ ಕಾಂಪ್ಲೇಕ್ಸ್ ಎಂಬುವುದು ಸದರಿ ಗೂಡ್ ಅಂಗಡಿಯ ದಕ್ಷಿಣ-ಪಶ್ಚಿಮದಲ್ಲಿರುತ್ತದೆ. ಅವರ ಅಂಗಡಿಯ ಪ್ರಟೆಂಜ್ ಹಾಳು ಆಗುತ್ತದೆ ಎಂದು ಹೇಳಿ ಅನಂತಪದ್ಮನಾಭ ಉಡುಪರವರು ನಮಗೆ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ.

11. ಲೋಕಾಯುಕ್ತಕ್ಕೆ ಅವರು ದೂರು ಕೊಟ್ಟಿದ್ದರಿಂದ ದಿನಾಂಕ 30-06-2014 ರಂದು ಅವರ ಗೂಡು ಅಂಗಡಿಯನ್ನು ಬಲತ್ಕಾರವಾಗಿ ತೆಗೆಯಲು ಪ್ರಯತ್ನಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಕಡತದಲ್ಲಿ ನಾವು ವಾದಿಗೆ ಪಬ್ಲಿಕ್ ಪ್ರಿಮಿಸೆಸ್ ಇವಿಕ್ಷನ್ ಆ್ಯಕ್ಟ್ ನಡಿ ಕೊಟ್ಟಂತಹ ನೋಟಿಸು ಇರುವುದಿಲ್ಲ, ಸಾಕ್ಷಿ ನಮ್ಮ ಸರ್ಕಾರಿ ವಕೀಲರಿಗೆ ಆ ದಾಖಲೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.

12. ನಾನು ಅನಂತಪದ್ಮನಾಭ ಉಡುಪರವರೊಂದಿಗೆ ಶಾಮಿಲಾಗಿ ವಾದಿಯನ್ನು ಸ್ಥಳದಿಂದ ಎಬ್ಬಿಸಬೇಕೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತಿನ ಬಗ್ಗೆ

ವಾಸ್ತವಿಕವಾಗಿ ಏನು ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾಖಲೆಗಳ ಆಧಾರದ ಮೇಲೆ ಸಾಕ್ಷ್ಯಹೇಳುತ್ತಿದ್ದೇನೆ ಎಂದರೆ ಸರಿ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ